**ಸಾಕ್ಷಿಯನ್ನು ದಿಃ 15.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಎಂ.ಆರ್.ಹೆಚ್ ವಕೀಲರಿಂದಃ-**

ನನ್ನ ಗಂಡ ಮಾರುತಿ ರವರು ತೀರಿಕೊಂಡು 6 ವರ್ಷಗಳು ಆಗಿರುತ್ತವೆ. ಅವರಿಗೆ 1998 ನೇ ಸಾಲಿನಿಂದಲೂ ಡಯಾಬಿಟಿಸ್ ಇತ್ತು. 2013 ರಿಂದ ಡಯಾಲಿಸಿಸ್ ನಲ್ಲಿ ಇದ್ದರು. ನನ್ನನ್ನು ಮದುವೆ ಆದ ಸಮಯದಲ್ಲಿ ಅವರು ದೊಡ್ಡ ಬ್ಯೂಸಿನೆಸ್ ಮ್ಯಾನ್ ಇದ್ದರು ಎಂದರೆ ಸರಿ. ಅವರು ತೀರಿಕೊಳ್ಳುವರೆಗೂ ಬ್ಯೂಸಿನೆಸ್ ಮಾಡಿರುತ್ತಾರೆ. ನನ್ನ ಮಗ ವಕೀಲನಿದ್ದು ಊಟಿ ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾನೆ. ಮಗಳು ಸಹ ಬ್ಯಾಚುಲರ್ ಹೊಟೇಲ್ ಮ್ಯಾನೇಜಮೆಂಟ್ ನಲ್ಲಿ ಪದವೀದರ. ಮಕ್ಕಳು ತಮ್ಮ ತಮ್ಮ ವಿದ್ಯಾಭ್ಯಾಸಕ್ಕೆ ವೃತ್ತಿ ಮಾಡಿಕೊಂಡು ಇದ್ದಾರೆ. ನನ್ನ ಗಂಡ ಡಯಾಬಿಟಿಸ್ ನಿಂದ ಬಳಲುತ್ತಿದ್ದು ನಂತರ ಡಯಾಲಿಸಿಸ್ ನಿಂದ ತೀರಿಕೊಂಡಿರುತ್ತಾರೆ. ಈ ದಿನ ನಡೆದ ಪಾಟೀ ಸವಾಲಿನಲ್ಲಿ ಮೇಲೆ ಹೇಳಿದ ವಿಷಯಗಳನ್ನು ಅರ್ಜಿ ಹಾಕುವ ಸಂದರ್ಭದಲ್ಲಿ ನಮ್ಮ ವಕೀಲರಿಗೆ ಹೇಳಿರುತ್ತೇನೆ.

ನನ್ನ ಯಜಮಾನರು ಬದುಕಿದ್ದಾಗ ನನ್ನ ಮತ್ತು ಗಂಡನ ಮೇಲೆ 1 ನೇ ಎದುರುದಾರರು ಹುಣಸೂರು ನ್ಯಾಯಾಲಯದಲ್ಲಿ ಮೂರು ಕೇಸ್ ಗಳನ್ನು ಹಾಕಿದ್ದರು. ಸದರಿ ಮೂರು ಕೇಸ್ ಗಳು ಇನ್ನೂ ನಡೆಯುತ್ತಿದೆ ಎಂದರೆ ಸಾಕ್ಷಿ 2 ಕೇಸ್ ನಮ್ಮ ಪರವಾಗಿ ಆಗಿ 1 ಕೇಸ್ ಇನ್ನೂ ಬಾಕಿ ಇರುತ್ತದೆ. ದಾಖಲೆಗಳನ್ನು ಸರಿಯಾಗಿ ಕೊಟ್ಟಿಲ್ಲ ಎಂದು ಸದರಿ ಕೇಸ್ ಗಳು ವಜಾ ಆಗಿರುತ್ತವೆ. ಸದರಿ ಮೂರು ಕೇಸುಗಳ ದಾವೆಯಲ್ಲಿನ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿಲ್ಲ, ನನ್ನ ಯಜಮಾನರಿಗೆ ಗೊತ್ತಿತ್ತು. ಸದರಿ ಕೇಸುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಇಂದು ಹಾಜರು ಪಡಿಸಿರುತ್ತೇನೆ. ಹೀಗೆ

2 ಪ್ರಕರಣಗಳು, ಕೇಸ್ ಹಾಕಿದವರು ಹಾಜರಾಗದೆ ವಜಾಗೊಂಡಿರುತ್ತವೆ ಎಂದರೆ ಸಾಕ್ಷಿ ದಾಖಲೆಗಳನ್ನು ಕೊಟ್ಟಿರಲಿಲ್ಲ ಎನ್ನುತ್ತಾರೆ.

ಓ.ಎಸ್ 198/2015 ರ ದಾವೆಯಲ್ಲಿ 1 ನೇ ಎದುರುದಾರರು ಸರ್ವೆ ನಂ. 119/1 ರ ದೊಡ್ಡ ಹುಣಸೂರು ಗ್ರಾಮದ 2 ಎಕರೆ ಜಮೀನಿಗೆ ಸಂಬಂಧಿಸಿದಂತೆ ನಾನು ಮತ್ತು ನನ್ನ ಯಜಮಾನರು ಸೇರಿಕೊಂಡು ಮೋಸದ ಖಾತೆ ಮಾಡಿಕೊಂಡಿದ್ದೇವೆ ಎಂದು ದಾವೆ ಸಲ್ಲಿಸಿದ್ದರು ಎಂದರೆ ಸರಿ. ನಿಪಿ. 11 ರಿಂದ 34 ರ ಪೋಟೊಗಳನ್ನು ನಮ್ಮ ಮನೆಯ ಗೇಟ್ ಹತ್ತಿರ 4-5 ಜನ ಅಗಿಯುತ್ತಿದ್ದು, ಕಳ್ಳತನದ ಭಯ ಇತ್ತು ಎಂದು ತೋರಿಸಲು ಸದರಿ ಪೋಟೊಗಳನ್ನು ಹಾಜರು ಪಡಿಸಿರುತ್ತೇನೆ. ನಿಪಿ. 11 ಮತ್ತು 12 ರ ಪೋಟೊಗಳಲ್ಲಿ ಕಾಣಿಸಿರುವ ಜಾಗ ನಮ್ಮ ಮತ್ತು 1 ನೇ ಎದುರುದಾರರ ನಡುವೆ ವಿವಾದ ಇರುವ ಸ್ವತ್ತಿನ ಜಾಗ ಎಂದರೆ ಸಾಕ್ಷಿ ಈ ಕೇಸ್ ದಾಖಲು ಇರುವ ಕಾಲಕ್ಕೆ ವಿವಾದ ಇರಲಿಲ್ಲ. ಸದರಿ ಪೋಟೊಗಳನ್ನು 2018 ನೇ ಸಾಲಿನಲ್ಲಿ ತೆಗೆಯಲಾಗಿದೆ. ನಿಪಿ. 11 ಮತ್ತು 12 ರ ಪೋಟೊ ತೆಗೆಯುವುದಕ್ಕೂ ಓ.ಎಸ್ 242/2017 ದಾವೆ ಪೆಂಡಿಂಗ್ ಇತ್ತು ಎಂದರೆ ಸಾಕ್ಷಿ ಸದರಿ ದಾವೆಯಲ್ಲಿನ ಆಸ್ತಿಗೂ ಪೋಟೊದಲ್ಲಿನ ಆಸ್ತಿಗೂ ಸಂಬಂಧ ಇಲ್ಲ ಎನ್ನುತ್ತಾರೆ. ಸದರಿ ಓ.ಎಸ್ 242/2017 ರ ದಾವೆಯಲ್ಲಿ ಆಸ್ತಿ ಬಗ್ಗೆ ದಾವೆಯ ವಿಚಾರಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಸದರಿ ದಾವೆಯಲ್ಲಿ ನಾನು ತಕರಾರು ಸಲ್ಲಿಸಿದ್ದಿರಾ ಎಂದರೆ ನಾನು ಸಲ್ಲಿಸಿಲ್ಲ, ಆದರೆ ನನ್ನ ಗಂಡ ನೋಡಿಕೊಳ್ಳುತ್ತಿದ್ದರು.

ನಿಪಿ. 11 ಮತ್ತು 12 ಪೋಟೊಗಳಲ್ಲಿ ಕಾಣಿಸುವ ಸ್ವತ್ತು ಸರ್ವೆ ನಂಬರ್ ನಲ್ಲಿ ಇದೆ ಎಂದು ತೋರಿಸಲು ಆರ್.ಟಿ.ಸಿ ಹಾಜರು ಪಡಿಸಿದ್ದೇನೆ. ಸದರಿ ಪೋಟೊದಲ್ಲಿ ಕಾಣಿಸುವ ಜಾಗದಲ್ಲಿ ಬೇರೆ ಬೇರೆ ಸರ್ವೆ ನಂಬರ್ ಗಳಲ್ಲಿ ಒಟ್ಟು 1 ಎಕರೆ 21 ಗುಂಟೆ ಇದೆ. ನನ್ನ ಗಂಡ ಬದುಕಿದ್ದಾಗ ನನ್ನ ಮತ್ತು

ಅವರ ನಡುವಿನ ಸಂಬಂಧ ಚೆನ್ನಾಗಿ ಇತ್ತು. ಅವರು ಬದುಕಿದ್ದಾಗ ಇರುವ ಸ್ವತ್ತುಗಳ ಬಗ್ಗೆ ನನ್ನ ಬಳಿ ಚರ್ಚೆ ಮಾಡುತ್ತಿರಲಿಲ್ಲ. ಓ.ಎಸ್ 242/2017 ರ ದಾಖಲಾಗುವ ಸಮಯದಲ್ಲಿ ನನ್ನ ಗಂಡ ಇದ್ದರು. ಸದರಿ ದಾವೆಯಲ್ಲಿ ನಾನು, ನನ್ನ ಗಂಡ ಮತ್ತು ಮಗಳು ಪ್ರತಿವಾದಿಗಳಾದ ಕಾರಣ ಒಂದೇ ವಕೀಲರನ್ನು ನೇಮಿಸಿಕೊಂಡಿದ್ದೇವು. ಗಂಡ ತೀರಿಕೊಂಡ ನಂತರ ಸದರಿ ದಾವೆಯನ್ನು ನಾವೆ ಪ್ರತಿನಿಧಿಸುತ್ತಿದ್ದೇವು. ಸದರಿ ದಾವೆಯಲ್ಲಿ ಯಾವ ಆಸ್ತಿಯ ಮೇಲೆ ಮಾಡಿದ್ದಾರೆ ಎಂದು ವಕೀಲರಲ್ಲಿ ಕೇಳಿ ತಿಳಿದುಕೊಂಡಿಲ್ಲ. ನಿಪಿ. 11 ಮತ್ತು 12 ರ ಪೋಟೋಗಳಲ್ಲಿ ಕಾಣಿಸುವ ಜಾಗ ಸರ್ವೆ ನಂಬರ್ ನಲ್ಲಿ ಇದೆ ಎಂದು ಹೇಳಿದ್ದಿರಾ ಎಂದರೆ ಸ್ವಲ್ಪ ಜಾಗ ಅಲಿನೇಶನ್ ನಲ್ಲಿ ಇದೆ, ಸ್ವಲ್ಪ ಜಾಗ ಸರ್ವೆ ನಂಬರ್ ನಲ್ಲಿ ಇದೆ ಎಂದು ಹೇಳಿದ್ದೇನೆ ಎನ್ನುತ್ತಾರೆ. 1 ಎಕರೆ 21 ಗುಂಟೆ ಸಂಪೂರ್ಣ ಜಾಗ ಅಲಿನೇಶನ್ ಆಗಿದೆ ಎಂದರೆ ಸರಿಯಲ್ಲ. ಸದರಿ ಅಲಿನೇಶನ್ ಅದ ಜಾಗದಲ್ಲಿ ಅವರ ಮನೆಗೆ ತಿರುಗಾಡಲು ನಾವುಗಳು ತೊಂದರೆ ಮಾಡುತ್ತಿದ್ದೇವೆ ಎಂದು 1 ನೇ ಎದುರುದಾರರು ದಾವೆ ಹಾಕಿದ್ದರು ಎಂದರೆ ಆ ರೀತಿ ಹಾಕಿರಲಿಲ್ಲ.

ಓ.ಎಸ್ ನಂ. 242/2147 ರಲ್ಲಿನ ದಾವೆಯಲ್ಲಿನ ವಿಚಾರಗಳ ಬಗ್ಗೆ ಮತ್ತು ನಿಪಿ. 11 ಮತ್ತು 12 ರ ಪೋಟೊಗಳಲ್ಲಿನ ಜಾಗದ ಬಗ್ಗೆ ಸಂಪೂರ್ಣವಾಗಿ ನನಗೆ ಗೊತ್ತಿಲ್ಲ. ಇನ್ನೇರಡು ಕೇಸ್ ಗಳನ್ನು ಸಹ ನಾವುಗಳು 1 ನೇ ಎದುರುದಾರರ ಮನೆಗೆ ಓಡಾಡಲು ತೊಂದರೆ ಕೊಡುತ್ತಿದ್ದೇವೆ ಎಂದು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಗಳನ್ನು ಹಾಕಿದ್ದ 1 ನೇ ಎದುರುದಾರರನ್ನು ಕುಗ್ಗಿಸುವ ಸಂಬಂಧ ಈ ಕೇಸ್ ಅನ್ನು ಹಾಕಿದ್ದೆ ಎಂದರೆ ಸರಿಯಲ್ಲ. ಈ ಕೇಸ್ ನಲ್ಲಿ 1 ನೇ ಎದುರುದಾರರು ಮೊದಲು ಸಲ್ಲಿಸಿದ ತಕರಾರಿನೊಂದಿಗೆ ಹೆಚ್ಚುವರಿ ತಕರಾರು ಹಾಕಿರುವುದನ್ನು ನಾನು ಓದಿರುತ್ತೇನೆ. ಸದರಿ ಹೆಚ್ಚುವರಿ ತಕರಾರಿನಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆ. 1 ನೇ

ಎದುರುದಾರಿಗೆ ಮತ್ತು ಅವರ ಕುಟುಂಬಕ್ಕೆ ನಾವು ಯಾವ ರೀತಿಯ ಹಿಂಸೆ ಕೊಟ್ಟಿದ್ದೇವೆ ಎಂಬಬಗ್ಗೆ ಹೆಚ್ಚುವರಿ ತಕರಾರಿನಲ್ಲಿ ಹೇಳಿರಬಹುದು, ಅದರೆ ಅದು ಸುಳ್ಳು ಎಂದು ನುಡಿಯುತ್ತಾರೆ. ನಾನು ನನ್ನ ಅರ್ಜಿಯಲ್ಲಿ 1 ನೇ ಎದುರುದಾರರ ಮೇಲೆ ಹೇಳಿರುವ ಎಲ್ಲಾ ಆರೋಪಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿನ ಪ್ಯಾರಾ 1 ರಿಂದ 41 ನೇ ಪ್ಯಾರಾದಲ್ಲಿ ಹೇಳಿರುವ ಯಾವುದೆ ದಾಖಲೆಗಳು ಇಲ್ಲದೆ, ಸಾಕ್ಷಿಗಳಿಲ್ಲದೆ ಮಾಡಿರುವಂತಹ ಆರೋಪಗಳು ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯಕ್ಕೆ ದೂರುವಾಗಿರುವುದು ಎಂದರೆ ಸರಿಯಲ್ಲ.

ನಾನು 1 ನೇ ಎದುರುದಾರರ ಸ್ವಂತ ಅಕ್ಕನ ಮಗಳು ಎಂದರೆ ಸರಿ. ಸಾಕ್ಷಿ ಪುನಃ ಇಬ್ಬರು ಎದುರುದಾರರು ಸೋದರ ಮಾವಂದಿರು ಎನ್ನುತ್ತಾರೆ. ನನ್ನ ಮಗ ಕರಣೀಕುಮಾರ್ ನ ಮೇಲೆ ಪಿರಿಯಾಪಟ್ಟಣ ನ್ಯಾಯಾಲಯದಲ್ಲಿ ಸಿಸಿ 52/2023 ರಂತೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಅಕ್ರಮವಾಗಿ ಗಣೀಗಾರಿಕೆ ಮಾಡುತ್ತಿದ್ದಾರೆ ಎಂದು ಪ್ರಕರಣದ ದಾಖಲಾಗಿ ಎಂದರೆ ಸಾಕ್ಷಿ ಆಗಿತ್ತು ನಂತರ ಅದು ವಜಾ ಆಗಿರುತ್ತದೆ ಎನ್ನುತ್ತಾರೆ. ಸದರಿ ಕೇಸ್ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಎಸ್.ಸಿ ನಂ. 381/2024 ರಂತೆ ಪೆಂಡಿಂಗ್ ಇರುತ್ತದೆ ಎಂದರೆ ಸಾಕ್ಷಿ ಅದು ಸ್ಟೇ ಆಗಿರುತ್ತದೆ ಎಂದು ಹೇಳಿ, ನಂತರ ಅದು ಹೈ ಕೋರ್ಟ್ ನಲ್ಲಿ ಬಾಕಿ ಇರುತ್ತದೆ ಎನ್ನುತ್ತಾರೆ.

**ಪಾಟೀ ಸವಾಲುಃ 2 ನೇ ಎದುರುದಾರರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.